# ವಿಮಾನ ನಿಲ್ದಾಣಕ್ಕೆ ಬಸವಣ್ಣನವರ ಹೆಸರಿಡಿ

## 44ನೇ ಶರಣ ಕಮ್ಮಟ, ಅನುಭವ ಮಂಟಪ ಉತ್ಸವ ಉದ್ಘಾಟನೆಯಲ್ಲಿ ವಿಪ ಸಭಾಪತಿ ಬಸವರಾಜ ಹೊರಟ್ಟಿ ಅಭಿಮತ



44ನೇ ಶರಣ ಕಮ್ಮಟ, ಅನುಭವ ಮಂಟಪ ಉತ್ಸವವನ್ನು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಉದ್ಘಾಟಿಸಿದರು. ಸಚಿವ ಈಶ್ವರ ಖಂಡ್ರೆ, ಶಾಸಕ ಶರಣು ಸಲಗರ ಇದ್ದಾರೆ.

• **ಕನ್ನಡಪ್ರಭ ವಾರ್ತೆ** ಬಸವಕಲ್ಯಾಣ

ಕರ್ನಾಟಕದಲ್ಲಿರುವ ಯಾವುದಾದರೊಂದು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮಹಾತ್ಮಾ ಬಸವಣ್ಣನ ಹೆಸರನ್ನು ಇಡುವದು ಸೂಕ್ತ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯ ವ್ಯಕ್ತಪಡಿಸಿದರು.

ಇಲ್ಲಿನ ಅನುಭವ ಮಂಟಪ ಪರಿಸರದಲ್ಲಿ ಶನಿವಾರ 44ನೇ ಶರಣ ಕಮ್ಮಟ ಹಾಗೂ ಅನುಭವ ಮಂಟಪ ಉತ್ಸವವನ್ನು ಉದ್ಘಾಟಿಸಿ ಮಾತನಾಡಿ, ವಿಶ್ವದಾದ್ಯಂತ ಪ್ರಚಲಿತದಲ್ಲಿರುವ ಬಸವಣ್ಣನವರ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದು, ಬಿಟ್ಟರೆ ನಾವುಗಳು ರಾಜಧಾನಿ ಬೆಂಗಳೂರಿನಲ್ಲಿ ಬೇರೆ ಏನೂ ಮಾಡಿಲ್ಲ ಎಂದರು.

ಅನುಭವ ಮಂಟಪದ ಹೆಸರನ್ನು ನೂತನ ಪಾರ್ಲಿಮೆಂಟ್‌ನ ಯಾವುದಾದರೂ ಒಂದು ಸ್ಥಳದಲ್ಲಿ ಅಳವಡಿಸುವಂತೆ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದ್ದು, ಈ ಕುರಿತಂತೆ ನಾವೆಲ್ಲ ಒತ್ತಾಯಿಸೋಣ ಇನ್ನು ಬಸವಕಲ್ಯಾಣವನ್ನು ಅಂತಾರಾಷ್ಟ್ರೀಯ ಪ್ರವಾಸಿ ತಾಣವಾಗಬೇಕು ಅದಕ್ಕಾಗಿ ಶ್ರಮಿಸೋಣ ಎಂದು ಕರೆ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬಸವಣ್ಣನವರ ಬಗ್ಗೆ ಅಪಾರ ಪ್ರೀತಿ, ವಿಶ್ವಾಸ ಹಾಗೂ ಅಭಿಮಾನವಿದೆ. ಅವರ ಕಾಲಾವಧಿಯಲ್ಲಿ ಈ ಹಿಂದೆ ಎಲ್ಲ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರ ಹಾಕುವಂತೆ ಆದೇಶಿಸಿದ್ದು ಶ್ಲಾಘನೀಯ, ಇನ್ನು ಬಸವ ತತ್ವ ಪ್ರಚಾರ ಹಾಗೂ ಬಸವಕಲ್ಯಾಣ ಪ್ರವಾಸಿ ತಾಣವಾಗಿಸುವ ಮತ್ತು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಸವಣ್ಣನ ಹೆಸರಿಡುವ ಕುರಿತು ಸಚಿವ ಸಂಪುಟದಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಬೇಕು ಅದಕ್ಕಾಗಿ ಸಚಿವ ಈಶ್ವರ ಖಂಡ್ರೆ, ಪ್ರಯತ್ನಿಸಲಿ ಅವರ ಹೆಸರು ಶಾಶ್ವತವಾಗಿ ಉಳಿಯುತ್ತದೆ ಎಂದು ತಿಳಿಸಿದರು.

**ಲಿಂಗಾಯತರೆಲ್ಲ ಒಂದಾಗೋಣ, ನಾಡಿಗೆ ಕೀರ್ತಿ ತರೋಣ:** ರಾಜ್ಯಕ್ಕೆ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದವರ ಪೈಕಿ 15-16 ಜನ ಲಿಂಗಾಯತರೇ ಆಗಿದ್ದಾರೆ, 110ಕ್ಕೂ ಹೆಚ್ಚು ಲಿಂಗಾಯತ ಶಾಸಕರೇ ಆಯ್ಕೆಯಾಗಿ ಬರುತ್ತಿದ್ದರು ಇದೀಗ ಕಾರಣಾಂತರಗಳಿಂದ ಬೇರೆ ಬೇರೆಯಾಗಿದ್ದೇವೆ, ಈಗಲಾದರೂ ನಾವೆಲ್ಲ ಒಂದಾಗಬೇಕು ಆಗ ಸಮಾಜಕ್ಕೆ ಅಲ್ಲ ಇಡೀ ನಾಡಿಗೆ ಹೆಸರು ಬರುತ್ತದೆ ಎಂದರು.

ಶಾಸಕ ಶರಣು ಸಲಗರ ಸ್ವಾಗತಿಸಿ ಮಾತನಾಡಿ, ಇದು ಕಾಯಕದ ಉತ್ಸವ, ದಾಸೋಹದ ಉತ್ಸವ ವಾಗಿದೆ. ಬಸವಕಲ್ಯಾಣ ಅಂತರಾಷ್ಟ್ರೀಯ ಪ್ರವಾಸಿ ತಾಣವಾಗಬೇಕೆಂದ ಅಪ್ಪಟ ಬಸವ ಭಕ್ತರ ಕನಸು ಶೀಘ್ರದಲ್ಲಿ ಈಡೇರುವ ಭರವಸೆ ಇದೆ ಎಂದರು.

ಸುತ್ತೂರಿನ ಜಗದ್ಗುರು ಡಾ. ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಅನುಭವ ಮಂಟಪದ ಅಧ್ಯಕ್ಷರಾದ ಡಾ.ಬಸವಲಿಂಗ ಪಟ್ಟದ್ದೇವರು, ಹಾರಕೂಡದ ಚನ್ನವೀರ ಶಿವಾಚಾರ್ಯರು, ಹುಲಸೂರಿನ ಶಿವಾನಂದ ಶ್ರೀಗಳು, ಭಾಲ್ಕಿ ಹಿರೇಮಠದ ಗುರುಬಸವ ಪಟ್ಟದ್ದೇವರು, ನಿವೃತ್ತ ನ್ಯಾಯಮೂರ್ತಿಗಳಾದ ಅನುಭವ ಮಂಟಪ ಪ್ರಶಸ್ತಿ ಪುರಸ್ಕೃತರಾದ ಶಿವರಾಜ ಪಾಟೀಲ್, ಡಾ.ಎಂಎಂ ಕಲಬುರಗಿ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರಾದ ಡಾ.ವಿ.ಬಿ ಶಿರೂರ, ಪೌರಾಡಳಿತ ಸಚಿವ ಈಶ್ವರ ಖಂಡ್ರೆ, ಮಾಜಿ ಸಂಸದ ಬಸವರಾಜ ಪಾಟೀಲ್ ಸೇಡಂ, ಶಾಸಕ ಶರಣು ಸಲಗರ, ಚಂದ್ರಶೇಖರ ಪಾಟೀಲ್, ಗುರುನಾಥ ಕೊಳ್ಳೂರ, ಬಾಬು ವಾಲಿ, ಧನರಾಜ ತಾಳಂಪಳ್ಳಿ, ಜಿಪಂ ಸಿಇಒ ಶಿಲ್ಪಾ ಎಂ ಸೇರಿ ಮತ್ತಿತರರು ಇದ್ದರು.

## ಸಮಾನತೆ ಕೇಂದ್ರವಾಗಿ ಬಸವಕಲ್ಯಾಣ ಬೆಳೆಯಲಿದೆ

• **ಕನ್ನಡಪ್ರಭ ವಾರ್ತೆ** ಬಸವಕಲ್ಯಾಣ

ಬಸವಣ್ಣನವರು ಸಮಾಜ ಸುಧಾರಣೆ ಧರ್ಮ ಚಿಂತನ ಪ್ರಜಾಪ್ರಭುತ್ವದ ಮೌಲ್ಯಗಳ ಬೀಜ ಬಿತ್ತಿದ್ದು, ಇದೇ ಬಸವಕಲ್ಯಾಣದಿಂದ ಹೀಗಾಗಿ ಇದು ವಿಶ್ವದ ಜನರ ಸಮಾನತೆ ಕೇಂದ್ರ ಸ್ಥಾನವಾಗಿ ಬೆಳೆಯಲಿದೆ ಎಂದು ಸುತ್ತೂರಿನ ಜಗದ್ಗುರು ಡಾ. ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ನುಡಿದರು.

ಇಲ್ಲಿನ ಅನುಭವ ಮಂಟಪದ ಪರಿಸರದಲ್ಲಿ 44ನೇ ಶರಣಕಮ್ಮಟ ಹಾಗೂ ಅನುಭವ ಮಂಟಪ ಉತ್ಸವದಲ್ಲಿ ದಿವ್ಯ ಸಾನಿಧ್ಯವಹಿಸಿ ಮಾತನಾಡಿ, ಭಕ್ತಿ, ಜ್ಞಾನ, ವೈರಾಗ್ಯದ ಸಮಾಗಮ ಸ್ಥಳ ಬಸವಕಲ್ಯಾಣವಾಗಿದೆ ಎಂದರು.

ಅಕ್ಕಮಹಾದೇವಿ, ಅಲ್ಲಮಪ್ರಭು, ಬಸವಣ್ಣಾ, ಚೆನ್ನಬಸವಣ್ಣಾ, ಸೇರಿದಂತೆ 770 ಅಮರಗಣಂಗಳು ನಡೆದಾಡಿದ ಪುಣ್ಯ ಸ್ಥಳ ಬಸವಕಲ್ಯಾಣವಾಗಿದೆ. ಈ ನಗರವು ಜಗತ್ತಿನ ಐತಿಹಾಸಿಕ/ಧಾರ್ಮಿಕ ನಗರಗಳಲ್ಲಿ ಒಂದಾಗಿ ಬೆಳೆಯಲು ಬೇಕಾದ ಎಲ್ಲಾ ರೀತಿಯ ಸಹಾಯ ಸಹಕಾರ ನಮ್ಮದಾಗಿರುತ್ತದೆ ಎಂದರು.

**ಯುದ್ಧಗಳಿಗೆ ಪರಿಹಾರ ಬಸವ ವಚನಗಳು, ಭಾಷಾಂತರ ಅಗತ್ಯ:** ಬಸವಣ್ಣನವರ ತತ್ವಗಳು ನುಡಿಯುವುದಕ್ಕಿಂತ ನಡೆಯಲು ಪ್ರೇರಣೆಯಾಗುತ್ತವೆ. ಇದರಿಂದ ಆತ್ಮಶುದ್ಧಿ ವ್ಯಕ್ತಿ ವಿಕಾಸದ ಜೊತೆಗೆ ಕುಟುಂಬ ವಿಕಾಸನಗೊಳ್ಳಲಿದೆ ಹಾಗಾಗಿ ಇಂದು ವಿಶ್ವವು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ ಆದರಲ್ಲಿ ಇರಾನ್, ಇರಾಕ್, ರಷ್ಯಾ, ಉಕ್ರೇನ್, ಇಸ್ರೇಲ್, ಹಮಾಸ್ ಯುದ್ಧ ಸನ್ನಿವೇಶಗಳು ಜಗತ್ತನ್ನು ಪ್ರಳಯದ ಅಂಚಿಗೆ ತಳ್ಳುತ್ತಿವೆ ಇವರಲ್ಲಿ ನಾ ಹೆಚ್ಚು, ತಾ ಹೆಚ್ಚು ಎಂಬ ಅಹಂಕಾರದಿಂದ 3ನೇ ಮಹಾಯುದ್ಧದ ಸನ್ನಿವೇಶ ನಿರ್ಮಾಣವಾಗಿದೆ ಇವರೆಲ್ಲರ ಸಮಸ್ಯೆಗಳಿಗೆ ಪರಿಹಾರ ದಯವೇ ಧರ್ಮದ ಮೂಲವೆಂಬ ಬಸವಣ್ಣನವರ ವಾಣಿ ಹಾಗೂ ಇವನಾರ ಇವ ನಾರವ ಎನ್ನದೆ ಇವ ನಮ್ಮವ ಎಂಬ ಕಲ್ಪನೆ ಅವರಿಗೆ ಮುಟ್ಟಿಲ್ಲ ಇದನ್ನು ಮುಟ್ಟಿಸಲು ವಚನ ಸಾಹಿತ್ಯ ಭಾಷಾಂತರ ಮಾಡುವ ಕೆಲಸ ಆಗಬೇಕು ಎಂದರು.



ಮಾಜಿ ರಾಜ್ಯಸಭಾ ಸದಸ್ಯ ಬಸವರಾಜ ಪಾಟೀಲ್ ಸೇಡಂ ಮಾತನಾಡಿ, ಬಸವಕಲ್ಯಾಣಕ್ಕೆ ಬರುವ ಪ್ರವಾಸಿಗರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಅದಕ್ಕೆ ಬೇಕಾದ ಊಟ ವಸತಿ ಗೈಡ್, ವಾಹನ ಸೌಕರ್ಯ ಮುಂತಾದ ಪೂರಕ ಕೆಲಸಗಳು ಇಲ್ಲಿ ನಡೆಯಬೇಕು ಎಂದರು.

ಗುರುಮಹಾಂತ ಮಹಾಸ್ವಾಮಿಗಳು ಚಿತ್ತರಗಿ ವಿಜಯಮಹಾಂತೇಶ್ವರ ಸಂಸ್ಥಾನ ಮಠ, ಇಳಕಲ್, ಡಾ.ಚನ್ನವೀರ ಶಿವಾಚಾರ್ಯ ಸಂಸ್ಥಾನ ಹಿರೇಮಠ ಹಾರಕೂಡ, ಡಾ.ಶಿವಾನಂದ ಮಹಾಸ್ವಾಮಿಗಳು ಗುರುಬಸವೇಶ್ವರ ಸಂಸ್ಥಾನ ಮಠ ಹುಲಸೂರು, ಸುಪ್ರಿಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲ್, ಸಭಾಪತಿ ಬಸವರಾಜ ಹೊರಟ್ಟಿ, ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಪೌರಾಡಳಿತ ಸಚಿವ ರಹೀಮ್ ಖಾನ್, ಡಾ.ಬಿ.ವಿ.ಶಿರೂರ, ಶಾಸಕರಾದ ಚಂದ್ರಶೇಖರ ಪಾಟೀಲ್, ಭೀಮರಾವ ಪಾಟೀಲ್ ಮತ್ತು ಶಶಿಕಾಂತ ದುರ್ಗೆ, ಬಸವರಾಜ ಕೋರಕೆ, ಗುರುನಾಥ ಕೊಳ್ಳೂರ, ಬಸವರಾಜ ಧನ್ನೂರ, ಬಾಬು ವಾಲಿ, ವೈಜಿನಾಥ ಕಾಮಶೆಟ್ಟಿ, ಧನರಾಜ ತಾಳಂಪಳ್ಳಿ, ಅರ್ಜುನ ಕನಕ, ನೀಲಕಂಠ ರಾಠೋಡ, ಆನಂದ ದೇವಪ್ಪ, ಬಾಬು ಹೊನ್ನನಾಯಕ, ಬಸವರಾಜ ಬುಳ್ಳಾ, ಸೋಮನಾಥ ಪಟ್ನೆ, ಸಂದೀಪ ಪಾಟೀಲ್, ಆರ್.ಕೆ ಸೂಗುರು ಇದ್ದರು.

ಶಾಸಕ ಶರಣು ಸಲಗರ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ನವಲಿಂಗ ಪಾಟೀಲ ನಿರೂಪಿಸಿ ಅಶೋಕರೆಡ್ಡಿ ನಿಂಗಾವರೆ ವಂದಿಸಿದರು. ಶಿವಕುಮಾರ ಪಂಚಾಳ ವಚನ ಸಂಗೀತ ನಡೆಸಿಕೊಟ್ಟರೆ ನೂಪುರ ಕಲಾ ತಂಡದಿಂದ ನೃತ್ಯ ರೂಪಕ ನೆರವೇರಿತು.